(SRI M. V. RAMA RAO)

House the Scheduled Castes and Scheduled Tribes Appointments Committee Report.

On behalf of the Minister for Revenue, I beg to lay on the Table of the House Notification No. RD 15 GHR 62-1, dated 21st September 1962 (Exemption of certain provisions of the Mysore Rent Control Act, 1961 (Mysore Act No. 22 of 1961) in respect of the Municipal Boroughs of Dharwar and Hubli as required under Section 60 of the Mysore Rent Control Act, 1961.

Sri G. NARAYANA GOWDA (Minister for Agriculture).—I beg to lay a statement as promised in reply to Starred Question No. 403 by Sri K. H. Ranganath. (Placed in the Mysore Legislature Library, *Vide* No. 8, dated 27th September 1962).

REPORT OF THE SELECT COMMITTEE ON THE MYSORE BUILDING TAX BILL 1962—PRESENTATION.

Sri B. D. JATTI (Minister for Finance).—I beg to present the Report of the Select Committee on the Mysore Buildings Tax Bill, 1962.

Business of the House.

Mr. SPEAKER.—One little further clarification: If I put any time limit, perhaps more members will participate. We should have no time limit. Then I will call upon Hon'ble Members as they are found. Is it an agreed list on behalf of everybody?

Sri S. SIVAPPA (Sravanabelagola).—It is almost an agreed list.

Mr. SPEAKER.—I will call upon the first speaker and have the last circulated to the members. If there is any objection, I will have to put a time limit and call upon some other members. I propose to give time as far as possible to both for and against.

MOTION OF NO-CONFIDENCE IN THE COUNCIL OF MINISTERS—

(*Debate continued*).

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಅಧ್ಯಕ್ಷರೇ, ನಮ್ಮ ಮುಂದೆ ಅವಿಶ್ವಾಸ ನಿರ್ಣಯ ಈಗ ಇದೆ. ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಅವಿಶ್ವಾಸ ನಿರ್ಣಯವನ್ನು ನಾವು ಮಂಡಿಸಲಿಕ್ಕೆ ಹೆಚ್ಚು ಕಾರಣಗಳಿವೆ. ಒಂದನೆಯದು ಚುನಾವಣೆಯ ಸಮಯದಲ್ಲಿ ನಾವು ಜನತೆಗೆ ಕೊಟ್ಟ ಆಶ್ವಾಸನೆ ಮತ್ತು ಭರವಸೆ, ಅವುಗಳನ್ನು ನಾವು ಈಡೇರಿಸತಕ್ಕ ಕರ್ತವ್ಯವೇನು, ಎರಡನೆಯದು ಸರ್ಕಾರ ಈಗಿನ ರೀತಿಯಲ್ಲಿ ಅದರ ಕರ್ತವ್ಯಗಳನ್ನು ಮಾಡಿಕೊಂಡು ಹೋದುದಾದರೆ ನಮ್ಮ ಆಡಳಿತದಿಂದ ಅನುಕೂಲ ಜನತೆಗೆ ಎಷ್ಟರಮಟ್ಟಿಗೆ ಆದೀತು ಎಂಬ ಒಂದು ಭಯ. ಹೀಗೆ ಅವರ ಒಂದು ಕರ್ತವ್ಯ ಮತ್ತು ಹೊಣೆಗಾರಿಕೆ ಮೇಲೆ ನಾವು ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ತಂದಿದ್ದೇವೆ. ಇದು ಕೇವಲ ನಮ್ಮ ವಿರೋಧ ಪಕ್ಷದವರದು ಮಾತ್ರ ವಿರೋಧವಲ್ಲ. ಇದು ಮೈಸೂರು ಜನತೆಯಲ್ಲಿ ಅರ್ಧ ಪಾಲಿಗೂ ಮಿಕ್ಕಿರುವ ಜನತೆಯ ವಿರೋಧ. ಏಕೆಂದರೆ ಕಳೆದಸಲ ಕಾಂಗ್ರೆಸ್ಸಿಗೆ ಓಟು ಸಿಕ್ಕಿದ್ದು ಶೇಕಡ 50ಕ್ಕಿಂತ ಸ್ವಲ್ಪ ಕಡಮೆಯಾಗಿತ್ತು. ಹೀಗಿರುವಾಗ 1957ರ ಚುನಾವಣೆಯಲ್ಲಿ ಓಟು ಸಿಕ್ಕಿರುವುದಕ್ಕಿಂತಲೂ ಕಡಮೆ ಸಿಕ್ಕಿದೆಯೆಂದು ನಾನು ಹೇಳಬಹುದು. ಆದರೆ ಇವರಿಗೆ ಸೀಟುಗಳೇನೋ ಹೆಚ್ಚು ಸಿಕ್ಕಿರಬಹುದು. ಹಾಗಿದ್ದರೂ ನಮಗೆ ವಿರೋಧವಾಗಿ ಶೇಕಡ 50ಕ್ಕಿಂತಲೂ ಹಾಸ್ಯಿ ಇರುವ ಜನತೆಯ ಜವಾಬ್ದಾರಿಯನ್ನು ಪ್ರಜ್ಞೋದ್ರೇಕರಿಸಿ ನಾವು ಈ ಅವಿಶ್ವಾಸ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇವೆ. ಈ ರೀತಿ ಒಂದು ಅತ್ಯಲ್ಪ ಜನತೆಯಲ್ಲಿ ಬೆಳೆದಿರುವುದನ್ನು ನಾವು ಇಲ್ಲಿ ತೋರಿಸುವುದು ನಮ್ಮ ಮುಖ್ಯ ಕರ್ತವ್ಯ. ಆದ್ದರಿಂದ ಈ ಪ್ರಶ್ನೆಯನ್ನು ನಾವು ಕೇವಲ 76 ಜನರು ಮಾತ್ರ ತಂದಿರುವರೆಂದು ತಿಳಿದುಕೊಳ್ಳದೆ ಜನತೆಯಲ್ಲಿ ಅರ್ಧಕ್ಕಿಂತ ಮಿಕ್ಕವರು ಈ ವಿಶ್ವಾಸ ನಿರ್ಣಯವನ್ನು ತಂದಿದ್ದಾರೆಂದು ತಿಳಿದುಕೊಳ್ಳಬೇಕೆಂದು ಈ ಸಭಾಸದನ್ಯರೆಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ.

ಈ ನಿರ್ಣಯದಲ್ಲಿ 5 ಪ್ರಶ್ನೆಗಳು ಸೇರಿವೆ. ಎಲ್ಲವನ್ನೂ ಸ್ಥಿಮಿತಗೊಳಿಸಿ ಎಂದು ಹೇಳಲಿಕ್ಕೆ ಸಾಧ್ಯ ಉಂಟೇ ಎಂದು ಹೇಳುವುದಾದರೆ ಅದು ಸಾಧ್ಯವಿದೆ. ಏತಕ್ಕೆಂದರೆ ಒಂದು ಅಗಳು ಅನ್ನವನ್ನು ತೆಗೆದು ನೋಡಿ ಅದು ಬೆಂದಿದೆ ಅಥವಾ ಅದು ಬೆಂದಿಲ್ಲ ಎಂದು ಹೇಳಲಿಕ್ಕೆ ಸಾಧ್ಯ ಉಂಟು. ಮುಖ್ಯವಾದ 5 ಪ್ರಶ್ನೆಗಳನ್ನು ತೆಗೆದುಕೊಂಡು ಅದರ ಮೇಲೆ ನಾವು ಈಗ ಅವಿಶ್ವಾಸವನ್ನು ಸೂಚಿಸಿದ್ದೇವೆ. 5 ಪ್ರಶ್ನೆಗಳ ಮೇಲೆ ಇಲ್ಲಿಯವರೆಗೂ ನಿಮ್ಮ ಆಡಳಿತ ಸರಿಯಾಗಿಲ್ಲ. ಜನ ವಿರೋಧ ಆಡಳಿತವಾಗಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಆಡಳಿತ ನಡೆಯುತ್ತಿಲ್ಲ. ಸಮತಾವಾದದ ಸಮಾಜವನ್ನು ಸ್ಥಾಪಿಸಲಿಕ್ಕೆ ಸರಿಯಾದ ಆಡಳಿತ ನಡೆಯುತ್ತಿಲ್ಲ. ಒಂದು ಗೊತ್ತು ಗುರಿ ಒಂದು ಉದ್ದೇಶ ಇಲ್ಲದೆ ಆಡಳಿತ ನಡೆಯುತ್ತಿಲ್ಲ ಎನ್ನುವುದಕ್ಕೆ ಈ 5 ವಿಷಯಗಳಿದ್ದರೆ ಸಾಕು. 5 ವಿಷಯಗಳನ್ನು ತೆಗೆದುಕೊಂಡು ಒಂದು ನಿರ್ಣಯವನ್ನು ತರಲಿಕ್ಕೆ ಕಾರಣವಾಯಿತು. ನಿನ್ನೆಯ ದಿವಸ ವಿರೋಧಪಕ್ಷದ ಮಾನ್ಯ ಸದಸ್ಯರನೇಕರು ಮುಖ್ಯವಾಗಿ ಶರಾವತಿಯ ವಿಷಯದಲ್ಲಿ ನ್ಯಾಯಸಮ್ಮತವಾದ ಅಂಕಿ ಅಂಶಗಳನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ಉತ್ತರ ಹಿಂದೂಸ್ಥಾನದಲ್ಲಿ ಒಂದು ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಯನ್ನು ಉದ್ಘಾಟಿಸುತ್ತಾ, ಶರಾವತಿಯು ಬರಿಯ ಒಂದು ಉತ್ಪತ್ತಿ ಕೇಂದ್ರವಲ್ಲ, ಅದು ಒಂದು

† Indicates that the remarks or speeches have not been revised by the member concerned.